
ಪಿ. ಜಯವಂತ ಪೈ, ಕುಂದಾಪುರ

ಮನೆಯಲ್ಲಿರುವ ನಾಲ್ಕು ಗಡಿಯಾರಗಳು ನಾಲ್ಕು ಸಮಯ ತೋರಿಸುತ್ತವಲ್ಲ?



ಓಹ್! ಅದರಲ್ಲಿ ಕನಿಷ್ಠ ಮೂರರ ಟೈಂ ಚೆನ್ನಾಗಿಲ್ಲ ಎಂದಾಯಿತು!

ಜಾನಿ, ಬೆಂಗಳೂರು

ಭಾರತೀಯರೇ ತುಂಬಿರುವ ಮಾರಿಷಸ್ ಏಕೆ ಸ್ವಚ್ಛ?

ಕೊಳೆ ಮಾಡಿದರೆ ಹೊರಹಾಕುವರಲ್ಲ! ದಂಡ ಇಲ್ಲದಿದ್ದರೆ ನಮ್ಮವ ಭಂಡ.

ಬಿ.ಆರ್. ಉಷಾ, ಬೆಂಗಳೂರು

'ಏಳೇಳು ಜನ್ಮದಲ್ಲೂ ನೀನೇ ನನ್ನ ಗಂಡ ಆಗಬೇಕು' ಇದರ ಅರ್ಥ?

'ನಿನ್ನಷ್ಟು ವಿಧೇಯನಾಗಿ ಚಾಕರಿ ಮಾಡುವವನು ಇನ್ನಾರು ಜನ್ಮದಲ್ಲೂ ಸಿಗಲ್ಲ' ಎಂಬ ಗ್ಯಾರಂಟಿ.

ಕಾಳಿಹುಂಡಿ ಶಿವಕುಮಾರ್, ಮೈಸೂರು

ದೂರದಿಂದ ದೇವರನ್ನು ನೋಡಬಂದು ಹತ್ತಿರ ನಿಂತಾಗ ಕಣ್ಣು ಮುಚ್ಚಿಕೊಳ್ಳುವುದೇಕೆ?



ಪ್ರೀತಿಯ ಹೊರತಾಗಿ ಕಣ್ಣಲ್ಲಿ ಕಣ್ಣಿಟ್ಟು ಏನನ್ನೂ ಬೇಡಲು ಆಗದಿರುವುದರಿಂದ.

ಮೀನಾಕ್ಷಿ ರಾಮುಗುಂಡಿ, ಬೈಲಹೊಂಗಲ

ಸುದ್ದಿಗೂ, ವದಂತಿಗೂ ಏನು ವ್ಯತ್ಯಾಸ?

ಸುದ್ದಿ ನಾಳೆಗೆ ರದ್ದಿ. ವದಂತಿ ಚಿರಯೌವನೆ.

ಮಲ್ಲಿಕಾರ್ಜುನ. ಸುರಧೇನುಪುರ

ಖ್ಯಾತನಾಮರು ತಾವು ಹುಟ್ಟಿದ ಊರನ್ನು ಕುಗ್ರಾಮ ಎನ್ನುವುದೇಕೆ?

ಅವರಂಥವರಿಗೆ ಜನ್ಮ ನೀಡಿದ ಮೇಲೆ ಅದು ಸುಗ್ರಾಮ ಆಗಿ ಉಳಿದಿರದು ಎಂದು.

ಕೆ.ಎಂ. ಕೊಟ್ರಸ್ವಾಮಿ, ಸಂಡೂರು

ಪದಬಂಧಕ್ಕೂ, ಜೀವನಬಂಧಕ್ಕೂ ವ್ಯತ್ಯಾಸವೇನು?

ಜೀವನಬಂಧದಲ್ಲಿ ಸುಳಿಗಳು ಅನೇಕ; ಪದಬಂಧದಲ್ಲಿ ಸುಳಿವುಗಳು ಅನೇಕ.

ವಿ. ಹೇಮಂತಕುಮಾರ್, ಬೆಂಗಳೂರು

ಗಾಢವಾದ ಪ್ರೀತಿ ಸಾವಿನ ನಂತರವೂ ಬದುಕಿರುತ್ತದೆ ಅಲ್ಲವೆ?

ಸತ್ತವರನ್ನು ಮರೆಸುವಂತಹ ಪ್ರಿಯರು ಸಿಗದಿದ್ದರೆ ಮಾತ್ರ.

ಜಗದೀಶ ಬಿ. ಹೊಸೂರು, ಮೈಸೂರು

ದೇಹವೇ ದೇಗುಲವೆಂದ ಬಸವಣ್ಣನವರ ಅನುಯಾಯಿಗಳು ದೇವಸ್ಥಾನಗಳಿಗೆ ಹೋಗಿ ಏನನ್ನು ಹುಡುಕುತ್ತಿದ್ದಾರೆ?

ಅವರಿನ್ನೂ 'ಕಾಲೇ ಕಂಬ'ಕ್ಕೂ ಬಂದಿಲ್ಲ. ಉಳ್ಳವರು ಕಟ್ಟಿರುವ ಆಲಯ ನೋಡಲು ಬಂದಿದ್ದಾರೆ.

ಬಿದರಹಳ್ಳಿ ನಾಗರಾಜ್, ಹಿರೇಹಡಗಲಿ

ತಲೆ ತಗ್ಗಿಸುವುದಕ್ಕೂ, ತಲೆ ಬಾಗಿಸುವುದಕ್ಕೂ ವ್ಯತ್ಯಾಸವೇನು?

ಮೊಬೈಲ್ ನೋಡುತ್ತಿರುವನೆಂದು; ಮೊಬೈಕಲ್ಲಿ ವೇಗವಾಗಿ ಹೋಗುತ್ತಿರುವನೆಂದು.

ಸಿ.ಎಸ್. ಸೂರ್ಯಪ್ರಕಾಶ್, ಬೆಂಗಳೂರು

ನಮ್ಮ ನಾಯಕರು ಬೆಂಗಳೂರನ್ನು ಸಿಂಗಪುರ ಮಾಡಿದ ನಂತರವೇ 'ಸ್ವಚ್ಛ ನಗರ' ಪ್ರಶಸ್ತಿ ಲಭ್ಯವೆ?

ಹ್ಞ! ಮತ್ತಷ್ಟು ಸ್ಪೆಷಾಲಿಟಿ ಹಾಸ್ಪಿಟಲ್‌ಗಳನ್ನೆಬ್ಬಿಸಿ 'ನರ್ಸಿಂಗ ಪುರ' ಮಾಡಬಹುದಷ್ಟೆ!

ಅನಸೂಯಾ ಟಿ, ಕೇದಿಗೆಮನೆ

ಮನುಷ್ಯನ ಮನಸ್ಸು ಯಾವಾಗಲೂ ಹೊಸತನ, ಬದಲಾವಣೆ ಬಯಸಲು ಕಾರಣ?

ದಿನವೂ ಹೊಸ ಹೂವು, ಬದಲಾದ ಮೋಡಗಳ ಆಕಾರ ಕಾಣುವ ಸೂರ್ಯನ ಪ್ರೇರಣೆ.

ಶಾಂತ ಗೌಡ, ಬೆಂಗಳೂರು

ವಯಸ್ಸಾದ ಮೇಲೆ ಹೆಚ್ಚು ಮಾತನಾಡಬಾರದಂತೆ. ಹೌದಾ ಸಾರ್?

ಹೂಂ. ಮಾತನಾಡಿ ಬಾಯಾರಿದರೆ ಎದ್ದು ಹೋಗಲು ಕಷ್ಟ ಆಗುವುದರಿಂದ.

## ಬಹುಮಾನಿತ ಪ್ರಶ್ನೆ

ಪಿ.ಜೆ. ರಾಘವೇಂದ್ರ, ಮೈಸೂರು

ದಂಡ ವಸೂಲಿಗೂ ಡಿಸ್ಕೌಂಟ್ ಘೋಷಿಸಿರುವುದು ನ್ಯಾಯವೆ?

'ಡಿಸ್ಕೌಂಟ್ ಮರು ಉಲ್ಲಂಘನೆಗೆ ಪ್ರೇರಕ; ಅದು ಖಜಾನೆಗೆ ಪೂರಕ' ಎಂದನೊಬ್ಬ ವಿತ್ತತಜ್ಞ.

ಮೋಹನ್ ಎಸ್.

ಓದುಗರಿಗೆ ಪ್ರಶ್ನಿಸಿದವರ ಗೊಡವೆಗಿಂತ ಪ್ರಶ್ನೋತ್ತರದ ಒಡವೆ ಒಂದೇ ಸಾಕಲ್ಲವೆ ರಾಮ್?

ನಿಜ. ಆದರೆ ಉತ್ತರವೆಂಬ ಲೋಹ ಪಡೆಯಲು ಪ್ರಶ್ನಿಸುವವರೇ ಗಣಿ.

ವಾಸಣ್ಣ, ಧಾರವಾಡ

ದೊರೆ ಧರೆಗೆ ಹೊರೆ ಆಗಬಾರದು. ಆದರೆ ನಮ್ಮ ದೊರೆಗಳು ಹೊರೆ ಆಗುವುದಲ್ಲದೆ ಬರೆ ಹಾಕಲೂ ಹೇಸರಲ್ಲ?

ಇವರು ದೊರೆಗಳಲ್ಲ. ದರಕ್ಕೆ ಬಿಕರಿಯಾಗುವ ಹೊರೆಗಳು.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

ನ್ಯಾಯಕ್ಕೆ ಕಣ್ಣಿಲ್ಲ. ಪ್ರೀತಿಗೆ?



ಕಣ್ಣು ಬೇಕಿಲ್ಲ, ಹೃದಯವೇ ಸಾಕು.

ಕೆ. ಸತ್ಯನಾರಾಯಣ, ದೊಡ್ಡಬಳ್ಳಾಪುರ

ಭೀಮನ ಅಮಾವಾಸ್ಯೆಯ ಬದಲು ದ್ರೌಪದಿ ಅಮಾವಾಸ್ಯೆ ಇದ್ದಿದ್ದರೆ?

ಸುಮ್ಮನಿರಿ. ದ್ರೌಪದಿಯ ಒಂದು ಅಮಾವಾಸ್ಯೆಗೇ (ವಸ್ತ್ರಾಪಹರಣ) 18 ಅಕ್ಷೋಹಿಣಿ ಢಮಾರ್...

ದ್ವಾರಕಾನಾಥ್

ಸತ್ತಮೇಲೆ ಜೀವನ ಹೆಚ್ಚು ಸುಖವಾಗಿರುವುದರಿಂದಲೇ ಸತ್ತವರಾರೂ ಹಿಂತಿರುಗರೆನ್ನುವುದು ಸತ್ಯವೆ?

ಹಾಗೇನಿಲ್ಲವಂತೆ. 'ಏಳೇಳು ಜನ್ಮಕ್ಕೂ' ಎಂಬ ಕಂಡೀಷನ್ ಅಪ್ಲೈ ಆದೀತೆಂಬ ಭಯದಿಂದ ಹಿಂತಿರುಗರಂತೆ.

■ ರಾಮ್